# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1551
ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ. (ನಾಮ ನಿರ್ದೇಶಿತ)
ಉತ್ತರಿಸಬೇಕಾದ ದಿನಾಂಕ : 19.12.2025
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು); | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179 ಒಟ್ಟು 874 ವಸತಿ ಶಾಲೆ/ಕಾಲೇಜುಗಳು ಮೊರಾರ್ಜಿ ದೇಸಾಯಿ/ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01ರಲ್ಲಿ ನೀಡಲಾಗಿದೆ. |
| ಆ) | ಈ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ ನೌಕರರ ಸಂಖ್ಯೆ ಎಷ್ಟು; ಇವರುಗಳ ವೇತನ ವಿವರಗಳನ್ನು ಒದಗಿಸುವುದು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ 19860 (9261-ಬೋಧಕ, 2386-ಬೋಧಕೇತರ, 8213-ಗ್ರೂಪ್-ಡಿ) ಬೋಧಕ, ಬೋಧಕೇತರ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ. ಈ ಪೈಕಿ 5456 ಬೋಧಕರು 1127 ಬೋಧಕೇತರ ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ಹುದ್ದೆಗಳ ಎದುರಾಗಿ ಜಿಲ್ಲಾ ಹಂತದಲ್ಲಿ ಅತಿಥಿ ಶಿಕ್ಷಕರನ್ನು ಹೊರಸಂಪನ್ಮೂಲ ಏಜೆನ್ಸಿ ಮೂಲಕ ಶಿಕ್ಷಕರು/ ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಪಡೆದು ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ ಹಾಗೂ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಜಿಲ್ಲಾ ಹಂತದಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಸೇವೆಯನ್ನು ಪಡೆಯಲಾಗುತ್ತಿದೆ.<br>ಖಾಯಂ ಸಿಬ್ಬಂದಿಗಳ ವೇತನದ ವಿವರವನ್ನು ಅನುಬಂಧ-02ರಲ್ಲಿ ಮತ್ತು ಹೊರಸಂಪನ್ಮೂಲ ಸಿಬ್ಬಂದಿಗಳ ವೇತನದ ವಿವರವನ್ನು ಅನುಬಂಧ-03ರಲ್ಲಿ ನೀಡಲಾಗಿದೆ. |
| ಇ) | ಕ್ರೈಸ್ ಸಂಸ್ಥೆಯ ಅಧೀನದಲ್ಲಿರುವ ವಸತಿ ನಿಲಯಗಳು, ವಸತಿ ನಿಲಯ ವಿದ್ಯಾರ್ಥಿಗಳು ಹಾಗೂ ನಿಲಯ ಪಾಲಕರ ಸಂಖ್ಯೆ ಎಷ್ಟು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 ವಸತಿ/ ಕಾಲೇಜುಗಳ ಕಾರ್ಯನಿರ್ವಹಿಸುತ್ತಿವೆ. ಸದರಿ ವಸತಿ ಶಾಲೆ/ ಕಾಲೇಜುಗಳಲ್ಲಿ 217970 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 874 ವಸತಿ ಶಾಲೆ/ ಕಾಲೇಜುಗಳ ಪೈಕಿ 815 ನಿಲಯಪಾಲಕರ ಹುದ್ದೆ ಮಂಜೂರಾಗಿದ್ದು, 430 ಖಾಯಂ ನಿಲಯಪಾಲಕರು ಕಾರ್ಯನಿರ್ವಹಿಸುತ್ತಿದ್ದಾರೆ.<br>ನಿಲಯಪಾಲಕರ ಹುದ್ದೆ ಖಾಲಿ ಇರುವ ವಸತಿ ಶಾಲೆಗಳಲ್ಲಿ ಆಯಾ ವಸತಿ ಶಾಲೆಗಳ ಹಿರಿಯ ಶಿಕ್ಷಕರನ್ನು ನಿಲಯಪಾಲಕರ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಸೇವೆಯನ್ನು ಪಡೆಯಲಾಗುತ್ತಿದೆ. |

...2.

| | | |
|---|---|---|
| ಈ) | ಈ ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ನೀಡಲಾಗುವ ಪ್ರತಿ ದಿನದ ಊಟದ ಮೆನುವಿನ ವಿವರಗಳೇನು; ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆಯೇ? (ಮಾಹಿತಿ ಒದಗಿಸುವುದು); | 2022-23 ನೇ ಸಾಲಿನಲ್ಲಿ ವಸತಿ ಶಾಲೆ/ಕಾಲೇಜುಗಳ ಪ್ರತಿ ವಿದ್ಯಾರ್ಥಿಗೆ ರೂ.1750/-ಗಳ ಭೋಜನಾ ವೆಚ್ಚವನ್ನು ನಿಗಧಿಪಡಿಸಲಾಗಿರುತ್ತದೆ. 2024-25 ನೇ ಸಾಲಿಗೆ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ.100/-ಗಳ ಭೋಜನಾ ವೆಚ್ಚವನ್ನು ಹೆಚ್ಚಿಸಲಾಗಿದ್ದು, ಸದರಿ ರೂ.100/-ಗಳ ವೆಚ್ಚದಲ್ಲಿ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ, ಮೈಸೂರು (CFTRI) ರವರು ಶಿಫಾರಸ್ಸು ಮಾಡಿರುವ ಪೌಷ್ಠಿಕಾಂಶದ ಪುಡಿಯನ್ನು (Nutrition Powder) ವಿತರಿಸಲು ಟೆಂಡರ್ ಆಹ್ವಾನಿಸಿ ಟೆಂಡರ್ ಅಂತಿಮಗೊಳಿಸಲಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ: ಸಕಇ 208 ಎಂಡಿಎಸ್ 2025 ದಿನಾಂಕ:09.09.2025 ರಲ್ಲಿ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ದಿನ ನೀಡಬೇಕಾದ ಮೊಟ್ಟೆ, ಚಿಕನ್, ಮೀನು, ಹಾಲು, ಬಾಳೆಹಣ್ಣು, ಮಿಶ್ರಕಾಳು, ಸೊಪ್ಪು ಇತರೆ ಪೌಷ್ಠಿಕಾಂಶ ಭರಿತ ಆಹಾರ ಮತ್ತು ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ಸಂಜೆಯ ಲಘು ಫಲಹಾರ ಮತ್ತು ರಾತ್ರಿಯ ಊಟ ವಿವರಗಳನ್ನೊಳಗೊಂಡಂತೆ ಆಯಾಯಾ ಪ್ರದೇಶದಲ್ಲಿನ ಆಹಾರ ಪದ್ಧತಿಗಳನ್ವಯ ಪ್ರಾದೇಶಿಕವಾರು ಮೆನು ಚಾರ್ಟ್‌ನ್ನು ನಿಗಧಿಪಡಿಸಲಾಗಿರುತ್ತದೆ.<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ಕಾಲೇಜುಗಳ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ನಿಗಧಿಪಡಿಸಿರುವ ರೂ.1750/- ಗಳಲ್ಲಿ ರೂ.350/-ಗಳನ್ನು ಪಡಿತರ ಅಕ್ಕಿ, ಗೋಧಿ ಎತ್ತುವಳಿ, ಹಾಲು, ಗ್ಯಾಸ್ ಸಿಲಿಂಡರ್ ಇನ್ನಿತರೆ ವೆಚ್ಚಗಳಿಗೆ ಭರಿಸಲಾಗುತ್ತಿದ್ದು, ಉಳಿಕೆ ರೂ.1400/-ಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಿಂದ 2024-25ನೇ ಸಾಲಿನಿಂದ 2 ವರ್ಷಗಳ ಅವಧಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಲಾಗಿರುತ್ತದೆ.<br>ಮುಂದುವರೆದು, ಚಿಕ್ಕಬಳ್ಳಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜಿಲ್ಲಾ ಹಂತದಲ್ಲಿ ಟೆಂಡರ್ ಆಹ್ವಾನಿಸಿ, ಟೆಂಡರ್ ನ್ನು ಅಂತಿಮಗೊಳಿಸಿದರಿಂದ ಸದರಿ 2 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 29 ಜಿಲ್ಲೆಗಳಿಗೆ ಆಹಾರ ಪದಾರ್ಥಗಳನ್ನು ಪೂರೈಕೆಗೆ ನಿಯಮಾನುಸಾರ ಕೇಂದ್ರ ಕಛೇರಿಯಿಂದ ಜಿಲ್ಲಾವಾರು ಟೆಂಡರ್ ಆಹ್ವಾನಿಸಿ, 26 ಜಿಲ್ಲೆಗಳ ಎಲ್-1 ಬಿಡ್‌ದಾರರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ ಹಾಗೂ ಉಳಿದಂತೆ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಟೆಂಡರ್‌ನಲ್ಲಿ ಭಾಗವಹಿಸಿ ಅರ್ಹತೆಯನ್ನು ಹೊಂದಿರುವ ಎಲ್ಲಾ ಬಿಡ್‌ದಾರರು ಎಲ್1 ಆಗಿರುವುದರಿಂದ ಸದರಿ 2 ಜಿಲ್ಲೆಗಳಿಗೆ ಮರು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಅಂತಿಮಗೊಂಡಿದ್ದು, LOI ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಮತ್ತು ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಬಿಡ್ ದಾರರು ಮಾನ್ಯ ಉಚ್ಚ ನ್ಯಾಯಾಲಯದ W.P.No.27677/2025 ರಲ್ಲಿ ದಾಖಲಿಸಿದ್ದ ಪ್ರಕರಣವನ್ನು ದಿನಾಂಕ:19.11.2025 ರಂದು ವಜಾಗೊಳಿಸಲಾಗಿರುತ್ತದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

ಸಕಇ/289/ಎಂಡಿಎಸ್/2025

(ಡಾ.ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು

# ಅನುಬಂಧ-01

## ವಸತಿ ಶಾಲೆ/ಕಾಲೇಜುಗಳ ಸಂಖ್ಯೆ

| ಕ್ರ ಸಂ | ಜಿಲ್ಲೆಯ ಹೆಸರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಹಿಂದುಳಿದ ವರ್ಗ | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 22 | 3 | 5 | 30 |
| 2 | ಬಳ್ಳಾರಿ | 6 | 9 | 6 | 21 |
| 3 | ಬೆಳಗಾವಿ | 30 | 11 | 16 | 57 |
| 4 | ಬೆಂಗಳೂರು ಗ್ರಾಮಾಂತರ | 11 | 1 | 1 | 13 |
| 5 | ಬೆಂಗಳೂರು ನಗರ | 3 | 0 | 1 | 4 |
| 6 | ಬೀದರ್ | 21 | 6 | 5 | 32 |
| 7 | ಚಾಮರಾಜನಗರ | 13 | 6 | 2 | 21 |
| 8 | ಚಿಕ್ಕಬಳ್ಳಾಪುರ | 14 | 9 | 3 | 26 |
| 9 | ಚಿಕ್ಕಮಗಳೂರು | 25 | 3 | 7 | 35 |
| 10 | ಚಿತ್ರದುರ್ಗ | 16 | 15 | 4 | 35 |
| 11 | ದಕ್ಷಿಣ ಕನ್ನಡ | 8 | 0 | 5 | 13 |
| 12 | ದಾವಣಗೆರೆ | 18 | 6 | 3 | 27 |
| 13 | ಧಾರವಾಡ | 11 | 1 | 3 | 15 |
| 14 | ಗದಗ | 11 | 1 | 4 | 16 |
| 15 | ಹಾಸನ | 28 | 0 | 12 | 40 |
| 16 | ಹಾವೇರಿ | 18 | 5 | 6 | 29 |
| 17 | ಕಲ್ಬುರ್ಗಿ | 34 | 3 | 7 | 44 |
| 18 | ಕೊಡಗು | 4 | 2 | 4 | 10 |
| 19 | ಕೋಲಾರ | 19 | 4 | 5 | 28 |
| 20 | ಕೊಪ್ಪಳ | 16 | 8 | 8 | 32 |
| 21 | ಮಂಡ್ಯ | 29 | 1 | 13 | 43 |
| 22 | ಮೈಸೂರು | 24 | 10 | 5 | 39 |
| 23 | ರಾಯಚೂರು | 17 | 17 | 5 | 39 |
| 24 | ರಾಮನಗರ | 13 | 2 | 8 | 23 |
| 25 | ಶಿವಮೊಗ್ಗ | 23 | 1 | 10 | 34 |
| 26 | ತುಮಕೂರು | 37 | 11 | 10 | 58 |
| 27 | ಉಡುಪಿ | 4 | 1 | 6 | 11 |
| 28 | ಉತ್ತರಕನ್ನಡ | 17 | 6 | 6 | 29 |
| 29 | ವಿಜಯನಗರ | 12 | 7 | 5 | 24 |
| 30 | ವಿಜಯಪುರ | 20 | 3 | 2 | 25 |
| 31 | ಯಾದಗಿರಿ | 15 | 4 | 2 | 21 |
| **ಒಟ್ಟು** | | **539** | **156** | **179** | **874** |

# ಅನುಬಂಧ-02

| ಕ್ರ.ಸಂ | ಗುಂಪು | ಖಾಯಂ ಸಿಬ್ಬಂದಿಗಳ ಪದನಾಮ | ಮೂಲ ವೇತನ |
|---|---|---|---|
| 1 | ಎ | ಪ್ರಾಂಶುಪಾಲರು (ಪದವಿ ಪೂರ್ವ ಕಾಲೇಜು) | 90200/- |
| 2 | ಬಿ | ಉಪನ್ಯಾಸಕರು | 69250/- |
| 3 | ಬಿ | ಪ್ರಾಂಶುಪಾಲರು | 69250/- |
| 4 | ಬಿ | ಉಪ ಪ್ರಾಂಶುಪಾಲರು | 69250/- |
| 5 | ಬಿ | ನಿಲಯ ಪಾಲಕರು (ಪದವಿ ಪೂರ್ವ ಕಾಲೇಜು) | 61300/- |
| 6 | ಸಿ | ಸಹಾಯಕ ಶಿಕ್ಷಕರು | 58300/- |
| 7 | ಸಿ | ಚಿತ್ರಕಲಾ ಶಿಕ್ಷಕರು | 49050/- |
| 8 | ಸಿ | ಶುಶ್ರೂಶಕರು | 58300/- |
| 9 | ಸಿ | ಕಛೇರಿ ಅಧೀಕ್ಷಕರು | 54175/- |
| 10 | ಸಿ | ನಿಲಯ ಪಾಲಕರು | 44425/- |
| 11 | ಸಿ | ಪ್ರಥಮ ದರ್ಜೆ ಸಹಾಯಕರು | 44425/- |
| 12 | ಸಿ | ದ್ವಿತಿಯ ದರ್ಜೆ ಸಹಾಯಕರು | 34100/- |
| 13 | ಡಿ | ಗ್ರೂಪ್ ಡಿ | 27000/- |

# ಅನುಬಂಧ-03

## ಹೊರ ಸಂಪನ್ಮೂಲ ಸಿಬ್ಬಂದಿಗಳ ವೇತನದ ವಿವರ

| ಕ್ರ. ಸಂ | ಹುದ್ದೆ | ಹುದ್ದೆಗಳ ಸಂಖ್ಯೆ | ಮೂಲ ವೇತನ | ESI 13% | PF 3.25% | Service Charge 5% | GST 18% | ಪ್ರತಿ ಸಿಬ್ಬಂದಿಗೆ ಒಂದು ಮಾಹೆಗೆ ಒಟ್ಟು ವೇತನ |
|---|---|---|---|---|---|---|---|---|
| 1 | ಅಡುಗೆಯವರು | 2215 | 15068 | 1958.84 | 489.71 | 753 | 0 | 18269.55 |
| 2 | ಅಡುಗೆ ಸಹಾಹಕರು | 1520 | 14096 | 1832.48 | 458.12 | 705 | 0 | 17091.6 |
| 3 | ಗ್ರೂಪ್ ಡಿ (ಸ್ವಚ್ಛಾ ಸಿಬ್ಬಂದಿ, ಕಾವಲುಗಾರರು, ಜವಾನರು | 4205 | 12908 | 1678.04 | 419.51 | 645 | 2323.44 | 17973.99 |
| 4 | ಪ್ರಥಮ ದರ್ಜೆ ಸಹಾಯಕರು | 385 | 14118.65 | 1835.42 | 458.86 | 706 | 2541.36 | 19660.29 |
| 5 | ದ್ವಿತೀಯ ದರ್ಜೆ ಸಹಾಯಕರು | 47 | 13809.77 | 1795.27 | 448.82 | 690 | 2485.76 | 19229.62 |
| 6 | ಸ್ಟಾಫ್ ನರ್ಸ್ | 551 | 15472 | 2011.36 | 502.84 | 774 | 0 | 18760.2 |
| 7 | ಹೊರಸಂಪನ್ಮೂಲ ಶಿಕ್ಷಕರು | 433 | 16650 | 2164.5 | 541.13 | 833 | 0 | 20188.63 |
| 8 | ಅತಿಥಿ ಉಪನ್ಯಾಸಕರು | 452 | 18150 | 0 | 0 | 0 | 0 | 18150 |
| 9 | ಅತಿಥಿ ಶಿಕ್ಷಕರು | 2338 | 16650 | 0 | 0 | 0 | 0 | 16650 |
|  | ಒಟ್ಟು | 12146 |  |  |  |  |  |  |